# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in

ಸಂಖ್ಯೆ:ಎಸ್‌ಹೆಚ್‌ಕ್ಯೂ/ 575 /2026–27 ದಿನಾಂಕ:04.07.2026

ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,
ಜಿಲ್ಲಾ ಸಂಸ್ಥೆ,
ಕರ್ನಾಟಕ.

**ಮಾನ್ಯರೆ,**

ವಿಷಯ:– ಜುಲೈ–2026ರ ಮಾಹೆಯಾದ್ಯಂತ ಸಸ್ಯೋತ್ಸವ, ಯೋಗೋತ್ಸವ, ಕಾರ್ಗಿಲ್ ವಿಜಯೋತ್ಸವ, ಪೋಷಕರ ದಿನಾಚರಣೆ ಮತ್ತು ಮಳೆನೀರು ಕೊಯ್ಲು ಯೋಜನೆಯನ್ನು ಆಚರಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಳ ಹಂತದಲ್ಲಿ, ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳಲ್ಲಿ ಜುಲೈ–2026 ಮಾಹೆಯಾದ್ಯಂತ ಈ ಕೆಳಕಂಡಂತೆ ಕಾರ್ಯಕ್ರಮ, ಚಟುವಟಿಕೆ ಹಾಗೂ ಸ್ಪರ್ಧೆಗಳನ್ನು ಯಶಸ್ವಿಯಾಗಿ ಯೋಜಿಸಿ, ಕಾರ್ಯಗತಗೊಳಿಸಲು ಕೋರಲಾಗಿದೆ.

**ಸಸ್ಯೋತ್ಸವ ಮತ್ತು ಯೋಗೋತ್ಸವ:** ಅತೀ ಹೆಚ್ಚಿನ ಗಿಡಗಳನ್ನು ನೆಟ್ಟು, ಸಸ್ಯೋತ್ಸವವನ್ನು ಆಚರಿಸುವುದು ಮತ್ತು ಯೋಗಕ್ಕೆ ಸಂಬಂಧಿಸಿದಂತೆ ಯೋಗೋತ್ಸವವನ್ನು ಆಚರಿಸಲು ವಿವಿಧ ಕಾರ್ಯಕ್ರಮ, ಸ್ಪರ್ಧೆಗಳನ್ನು ಆಯೋಜಿಸುವುದು.

**ಕಾರ್ಗಿಲ್ ವಿಜಯೋತ್ಸವ:** ದಿನಾಂಕ:26.07.2026 ರಂದು ಕಾರ್ಗಿಲ್ ವಿಜಯೋತ್ಸವವನ್ನು ಆಚರಿಸಿ ಸ್ಥಳೀಯ ಮಿಲಿಟರಿ ಅಧಿಕಾರಿಗಳು, ಸೈನಿಕರು, ನಿವೃತ್ತ ಅಧಿಕಾರಿಗಳನ್ನು ಗೌರವಿಸಿ, ಅವರ ಅನುಭವಗಳನ್ನು ಮಕ್ಕಳಿಗೆ ತಿಳಿಸುವುದು.

**ಪೋಷಕರ ದಿನಾಚರಣೆ:** ದಿನಾಂಕ:26.07.2026 ರಂದು ಪೋಷಕರ ದಿನಾಚರಣೆಯನ್ನು ದಳಗಳಲ್ಲಿ ನಡೆಸಿ ಮಕ್ಕಳಿಂದ ಗ್ರೀಟಿಂಗ್ ಕಾರ್ಡ್ಸ್ ತಯಾರಿಕೆ, ಹೂಗುಚ್ಛ ತಯಾರಿಕೆ, ಸ್ವೀಟ್ಸ್ ತಯಾರಿಸುವುದು, ಪಾದಪೂಜೆ ಮಾಡುವುದು, ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘಟಿಸುವುದು. ಇದಕ್ಕೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ಭೇಟಿ ಮಾಡಿ ಸಹಕಾರ ಪಡೆದು ಯಶಸ್ವಿಗೊಳಿಸುವುದು.

**ಮಳೆನೀರು ಕೊಯ್ಲು ಯೋಜನೆ:** ಮಳೆನೀರು ಕೊಯ್ಲು ಯೋಜನೆಯ ಬಗ್ಗೆ ಮಾಹಿತಿ ನೀಡಿ ಮಕ್ಕಳಿಗೆ ನೀರಿನ ಬಳಕೆ ಮತ್ತು ಉಳಿತಾಯದ ಬಗ್ಗೆ ಪ್ರಾತ್ಯಕ್ಷಿಕವಾಗಿ ತಿಳಿಸಲು ಕೋರಲಾಗಿದ

ಈ ಮೇಲಿನ ಎಲ್ಲಾ ವಿಶೇಷ ಕಾರ್ಯಕ್ರಮಗಳನ್ನು ಜುಲೈ ತಿಂಗಳಿನಾದ್ಯಂತ, ಜುಲೈ 2026ರ ಮಾಹೆಯ ಇತರ ಕಾರ್ಯಚಟುವಟಿಕೆಗಳ ಜೊತೆಗೆ ಎಲ್ಲಾ ದಳ ಹಂತದಿಂದ ಜಿಲ್ಲಾ ಹಂತದವರೆಗೆ ನೇರವಾಗಿ ಅಥವಾ ಆನ್‌ಲೈನ್ ಮೂಲಕ ಸಂಘಟಿಸಿ ಶಿಬಿರದ ಪ್ರಾಮುಖ್ಯತೆಯನ್ನು ಅರ್ಥಪೂರ್ಣವಾಗಿ ಆಚರಿಸಿ ಯಶಸ್ವಿಗೊಳಿಸಿ ರಾಜ್ಯ ಸಂಸ್ಥೆಗೆ ವರದಿಯನ್ನು ಕಳುಹಿಸಲು ಕೋರಲಾಗಿದೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು :

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎ.ಎಸ್.ಓ.ಸಿ/ಡಿಒ/ಡಿಓಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ & ಕಛೇರಿ ಪ್ರತಿ